VIJAYAKUMAR KANNUR
Digitally signed by VIJAYAKUMAR KANNUR
Date: 2026.01.08 10:51:06 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 07.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಎಸ್ ಪಿ ವಕೀಲರಿಂದ :</u>**

ಈ ದಾವೆಯನ್ನು ವಾದಿಯರು ನಮ್ಮ ವಿರುದ್ದ ದಾಖಲು ಮಾಡಿರುವರು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾವು ಖೊಟ್ಟಿಯಾಗಿ ಖರೀದಿ ಪತ್ರ ಮಾಡಿಕೊಂಡಿರುವುದಾಗಿ ಎಂದು ಹೇಳಿ ವಾದಿಯರು ಈ ದಾವೆಯನ್ನು ದಾಖಲು ಮಾಡಿರುವರು. ನಾನು ಪ್ರತಿವಾದಿ 2 ರವರ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿರುವೆನು. 2003 ರ 11 ನೇ ತಿಂಗಳಲ್ಲಿ ನಮ್ಮ ಮತ್ತು ವಾದಿಯರ ಮಧ್ಯೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಖರೀದಿ ಕರಾರು ಪತ್ರವಾಗಿತ್ತು. ಆ ಕರಾರು ಪತ್ರದಲ್ಲಿ ಸರ್ವೆ ನಂಬರ್ 12/6 ಮತ್ತು 12/9 ರ ಜಮೀನಿಗೆ ಸಂಬಂಧಪಟ್ಟಂತೆ ಆಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಕರಾರು ಪತ್ರ ಬರೆದುಕೊಟ್ಟಿರುವರು. ಆ ಕರಾರು ಪತ್ರವನ್ನು ಮುಧೋಳ ಪಟ್ಟಣದ ದಸ್ತೂರು ಬರಹಗಾರರ ಹತ್ತಿರ ಬರೆಸಿರುವೆವು. ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಈ ಖರೀದಿ ಕರಾರು ಪತ್ರವನ್ನು ವಾದಿಯರೇ ತಯಾರು ಮಾಡಿದ್ದು, ಅದಕ್ಕೆ ನಾವು ಕೇವಲ ನಂತರ ಬಂದು ಸಹಿ ಮಾಡಿರುವೆವು. ನಾನು ಸಹ ಸಹಿ ಮಾಡಿರುವೆನು. ಕರಾರು ಪತ್ರದ ಮೇಲೆ ರಂಗಪ್ಪ ಅಂಬಲಜೇರಿ, ಲಕ್ಷ್ಮಣ ಅಂಬಲಜೇರಿ, ರಾಮಚಂದ್ರ ಮಿರಜಿ, ಗೌಡಪ್ಪ ಸಿಂಗರೆಡ್ಡಿ, ಭೀಮಪ್ಪ ಮಸಾಳಿ ಎಂಬುವವರು ಸಹಿ ಮಾಡಿರುವರು.

2. ಆ ಕರಾರು ಪತ್ರದಲ್ಲಿ ಜಮೀನನ್ನು ರೂ. 3,36,600/- ಗಳಿಗೆ ಮಾರಾಟ ಮಾಡುವುದಾಗಿ ಎಂದು ಹೇಳಿ ಮುಂಗಡವಾಗಿ ರೂ. 1,68,000/- ಹಣವನ್ನು ಪಡೆದುಕೊಂಡಿರುವುದಾಗಿ ಎಂದು ಹೇಳಿ ಅದರಲ್ಲಿ ಬರೆದಿದ್ದರು. ಈ ಹಣವನ್ನು ನೀಡಿರುವ ದಿನಾಂಕ ನೆನಪಿರುವುದಿಲ್ಲ, ಆದರೆ ಆ ಖರೀದಿ ಕರಾರು ಪತ್ರ ಬರೆದ ದಿನವೇ ನೀಡಿರುವೆವು. ಈ ಜಮೀನಿನ ಖರೀದಿ ವ್ಯವಹಾರದ ಮಾತುಕತೆ ಬಂಟನೂರು ಗ್ರಾಮದಲ್ಲಿ ಆಗಿರುವುದು, ಆ ಪ್ರಕಾರ ಮುಧೋಳ

ಪಟ್ಟಣದಲ್ಲಿ ಖರೀದಿ ಕರಾರು ಪತ್ರ ಬರೆದಿರುವರು. ಆ ಮಾತುಕತೆಯ ಪ್ರಕಾರವೇ ಖರೀದಿ ಕರಾರು ಪತ್ರ ಬರೆಸಿವೆವು. ಈ ಖರೀದಿ ಕರಾರು ಪತ್ರದ ಪ್ರಕಾರ ಬಾಕಿ ಉಳಿದಿರುವ ಹಣವನ್ನು ಪಡೆದುಕೊಂಡು 5-6 ತಿಂಗಳಲ್ಲೇ ನೊಂದಾಯಿತ ಖರೀದಿ ಪತ್ರ ಬರೆದುಕೊಡಬೇಕೆಂದು ಮಾತುಕತೆಯಾಗಿರುವುದು. ಈ ಸಂಗತಿಯನ್ನು ಸಹ ಖರೀದಿ ಕರಾರು ಪತ್ರದಲ್ಲಿ ಬರೆಸಿರುವೆವು. ನಂತರ 2004 ರಲ್ಲಿ ವಾದಿಯರು ಮತ್ತೊಂದು ಜಮೀನು ಮಾರಾಟ ಮಾಡುವುದಾಗಿ ಎಂದು ನಮ್ಮ ಹತ್ತಿರ ಬಂದಿದ್ದರು. ಆ ಸಮಯದಲ್ಲಿ ವಾದಿಯರು ಮತ್ತು ಹಿರಿಯರು ಸಹ ಹಾಜರಿದ್ದರು. ಈ ಹಿರಿಯರಲ್ಲಿ ಮಸಾಳಿ ಎಂಬ ವ್ಯಕ್ತಿಯನ್ನು ಹೊರತು ಪಡಿಸಿ ಉಳಿದ ವ್ಯಕ್ತಿಗಳು ನಮ್ಮ ಸಂಬಂಧಿಗಳೇ ಎಂದರೆ ಸರಿಯಲ್ಲ. ವಾದಿಯರು ತಮ್ಮದು ಇನ್ನಷ್ಟು ಸಾಲ ಇರುವುದು ಆ ಕಾರಣಕ್ಕೆ ಮತ್ತೊಂದು ಜಮೀನನ್ನು ಮಾರಾಟ ಮಾಡುವುದಾಗಿ ಎಂದು ಹೇಳಿ ನಮ್ಮ ಹತ್ತಿರ ಬಂದಿದ್ದರು.

3. ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮುಧೋಳದ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ವಾದಿಯರು ದಾವೆ ದಾಖಲು ಮಾಡಿದ್ದರು ಎಂದರೆ ಸರಿ. ಆ ದಾವೆಯನ್ನು ಅಧಿವಿಚಾರಣೆ ಮಾಡಲು ಮೌಲಿಕ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದು ಹೇಳಿ ಪ್ರಧಾನ ಸಿವಿಲ್ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಮುಧೋಳರವರು ಅಸಲು ದಾವಾ ನಂ. 227/2013 ವಾದ ಪತ್ರವನ್ನು ಮರಳಿ ನೀಡಿರುವರು ಎಂದರೆ ಸರಿ. ಈ ದಾವೆಯನ್ನು ಈ ನ್ಯಾಯಾಲಯದಲ್ಲಿ ವಾದಿಯರು ದಾಖಲು ಮಾಡಿರುವರು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಅಸಲು ದಾವಾ ನಂ. 227/2013 ರ ದಾವೆಯಲ್ಲಿ ನಮ್ಮ ಪರವಾಗಿ ಲಿಖಿತ ಪತ್ರವನ್ನು ಸಲ್ಲಿಸಿದ್ದೇವು. ಅದರಲ್ಲಿನ ಸಂಗತಿಗಳನ್ನು ಓದಿ ನೋಡಿಯೇ ಸಲ್ಲಿಸಿದ್ದೇವು ಎಂದರೆ ಸರಿ. ಆ ಲಿಖಿತ ಪತ್ರದಲ್ಲಿನ ಸಂಗತಿಗಳನ್ನು ನಮ್ಮ ಹೇಳಿಕೆಯ ಪ್ರಕಾರ ನಮ್ಮ ವಕೀಲರು ಬರೆದಿದ್ದರು ಎಂದರೆ ಸರಿ.

4. ನಿಪಿ 6 ರ ಖಂಡಿಕೆ 10 ರಲ್ಲಿ ಬರೆಸಿರುವಂತೆ ಸರ್ವೇ ನಂಬರ್ 12/6 ಮತ್ತು 12/9 ರ ಜಮೀನುಗಳನ್ನು ರೂ.3,36,600/- ಗಳಿಗೆ ಖರೀದಿ ಮಾಡುವ ಇಚ್ಚೆಯನ್ನು ನಾವು

ವ್ಯಕ್ತಪಡಿಸಿರುವುದಾಗಿ ಎಂದು ಬರೆಸಿರುವ ಸಂಗತಿ ನಿಜವಿರುವುದು. ಅದೇ ರೀತಿ ದಿಃ 21.01.2003 ರಂದು ವಾದಿಯರು ನಮ್ಮ ಕಡೆಯಿಂದ ಮುಗಂಡವಾಗಿ ರೂ.1,68,300/- ಹಣವನ್ನು ಪಡೆದುಕೊಂಡು ಸರ್ವೇ ನಂಬರ್ 12/6 ವಿಸ್ತೀರ್ಣ 28 ಗುಂಟೆ ಹಾಗೂ 12/9 ವಿಸ್ತೀರ್ಣ 3 ಎಕರೆ 5 ಗುಂಟೆಯ ಜಮೀನಿಗೆ ಸಂಬಂಧಪಟ್ಟಂತೆ ನೊಂದಾಯಿತವಲ್ಲದ ಕರಾರು ಪತ್ರ ಬರೆದುಕೊಟ್ಟಿರುವುದಾಗಿ ಎಂದು ಬರೆಸಿರುವ ಸಂಗತಿ ನಿಜವಿರುವುದು. ನಿಪಿ 6 ರ ಖಂಡಿಕೆ 11 ರಲ್ಲಿ ಹೇಳಿರುವಂತೆ ಸರ್ವೇ ನಂಬರ್ 12/9 ರ ಜಮೀನಿನ ಬದಲು 66/1 ರ ಜಮೀನಿನ ಪಶ್ಚಿಮ ದಿಕ್ಕಿನ 3 ಎಕರೆ ಜಮೀನು ಖರೀದಿ ಮಾಡಿರುವುದಾಗಿ ಎಂದು ಬರೆದಿರುವ ಸಂಗತಿ ನಿಜವಿರುವುದಿಲ್ಲ, ಆದರೆ ಸರ್ವೇ ನಂಬರ್ 12/6 ವಿಸ್ತೀರ್ಣ 28 ಗುಂಟೆ ಹಾಗೂ ಸರ್ವೇ ನಂಬರ್ 66/1 ವಿಸ್ತೀರ್ಣ 3 ಎಕರೆಯ ಜಮೀನನ್ನು ದಿಃ 23.08.2004 ರಂದು ವಾದಿಯರು ನಮಗೆ ಜಮೀನು ಮಾರಾಟ ಮಾಡಿರುವರು. ಇದಕ್ಕೆ ಸಂಬಂಧಪಟ್ಟಂತೆ ರೂ. 1 ಲಕ್ಷ 73 ಸಾವಿರ ಪ್ರತಿಫಲದ ಹಣವನ್ನು ಪ್ರತ್ಯೇಕವಾಗಿ ನೀಡಿರುವೆವು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ 23.08.2004 ರಂದು ಬಾಕಿ ಉಳಿದಿರುವ ಖರೀದಿ ಹಣವನ್ನು ಸಹ ವಾದಿಯರಿಗೆ ನೀಡಿರುವೆವು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 12/9 ರ ಜಮೀನಿಗೆ ಸಂಬಂಧಪಟ್ಟಂತೆ ವಾದಿಯರು ಪ್ರತ್ಯೇಕವಾಗಿ ಖರೀದಿ ಪತ್ರ ಮಾಡಿಕೊಡುವುದಾಗಿ ಎಂದು ಹೇಳಿರುವರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 6 ರ ಖಂಡಿಕೆ 11 ರಲ್ಲಿ ಬರೆದಿರುವ ಸಂಗತಿಗಳು ನಿಜವಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಪಿ 6 ರ ಖಂಡಿಕೆ 11 ರ ಕೊನೆಯ ಎರಡು ಸಾಲಿನಲ್ಲಿ ಹೇಳಿ ಬರೆಸಿರುವಂತೆ ನಾವು ಸರ್ವೇ ನಂಬರ್ 66/1 ರ ಜಮೀನಿಗೆ ಸಂಬಂಧಪಟ್ಟಂತೆ ವಾದಿಯರ ಹೆಸರಿನಲ್ಲಿ ಮರಳಿ ಹಸ್ತಾಂತರದ ಖರೀದಿ ಪತ್ರ ಮಾಡಿಕೊಡುವುದಾಗಿ ಎಂದು ಹೇಳಿ ಬರೆಸಿರುವ ಸಂಗತಿ ನಿಜವಿರುವುದಿಲ್ಲ. ನಿಪಿ 6 ರ ಖಂಡಿಕೆ 12 ರಲ್ಲಿ ಬರೆಸಿರುವ ಸಂಗತಿ ನಿಜವಿರುವುದಿಲ್ಲ. ಸರ್ವೇ ನಂಬರ್ 12/6, 12/9 ಮತ್ತು 66/1 ರ ಜಮೀನುಗಳನ್ನು ನಾವೇ ಕಬ್ಜೆ ಇರುವೆವು. ಈ ಸಂಗತಿಯನ್ನು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್

12/6 ರ ಜಮೀನನ್ನು ಮಾತ್ರ ಕಬ್ಜೆ ಹೊಂದಿದ್ದೇವೆ ಎಂದರೆ ಸರಿಯಲ್ಲ. ನಿಪಿ 6 ರ ದಾಖಲೆಯಲ್ಲಿನ ಸಾಕ್ಷಿಯ ಮತ್ತು ಪ್ರತಿವಾದಿ 2 ರವರ ಸಹಿಗಳನ್ನು ನೋಡಿ ಗುರುತಿಸಿರುವರು.

6. ಈ ಖರೀದಿ ಪತ್ರವನ್ನು ದಿಃ 23.08.2004 ರಲ್ಲಿ ಬರೆಸಿರುತ್ತೇವೆ. ದಸ್ತೂರು ಬರಹಗಾರನ ಹೆಸರು ತೆಗ್ಗಿ ಎಂದು ಇರುವುದು. ದಸ್ತೂರು ಬರಹಗಾರರ ಕಚೇರಿ ಮುಧೋಳದಲ್ಲಿ ಇರುವುದಿಲ್ಲ, ಲೋಕಾಪೂರದಲ್ಲಿ ಇರುವುದು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ನಿಪಿ 4 ರ ದಾಖಲೆಯ ಮೇಲಿನ ಡಿಬ್ಲ್ಯೂ 1 ರವರು ಸಹಿಯನ್ನು ತೋರಿಸಲಾಗಿ ಅದು ತನ್ನದೇ ಸಹಿಯಾಗಿರುವುದು ಎಂದು ಒಪ್ಪಿಕೊಂಡಿರುವರು. ಆದರೆ ನಿಪಿ 4 ರ ದಾಖಲೆಯಲ್ಲಿನ ಸಂಗತಿಗಳ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ. ನಿಪಿ 4 ರ ದಾಖಲೆಯನ್ನು ವಾದಿಯರು ನನಗೆ ನೀಡಿರುವುದಿಲ್ಲ. ತಾನು ಕೇವಲ ಆ ದಾಖಲೆಯ ಮೇಲೆ ಸಹಿ ಮಾಡಿರುವುದಾಗಿ ಎಂದು ಉತ್ತರಿಸುವರು. ನಿಪಿ 4 ರಲ್ಲಿನ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಿಪಿ 4 ರ ಮೇಲೆ ಇರುವ ಸಾಕ್ಷಿದಾರರ ಸಹಿಗಳನ್ನು ಸಾಕ್ಷಿಗೆ ತೋರಿಸಲಾಗಿ ಅವರ ಹೆಸರುಗಳ ಆಧಾರದ ಮೇರೆಗೆ ಆ ವ್ಯಕ್ತಿಯ ಹೆಸರು ನಮೂದು ಮಾಡಿದ್ದು ಆದರೆ ಅವರು ನಿಪಿ 4 ರ ದಾಖಲೆಯ ಮೇಲೆ ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಯರು ಅನಕ್ಷರಸ್ಥರಿದ್ದು ಅವರು ಹೆಬ್ಬೆಟ್ಟಿನವಾಗಿರುವರು ಎಂದರೆ ಸರಿ. ನಿಪಿ 4 ರ ದಾಖಲೆಯನ್ನು ನಾವೇ ಬರೆಸಿಕೊಟ್ಟಿದ್ದು ಮತ್ತು ಆ ಖರೀದಿ ಪತ್ರದ ಮೇಲೆ ಸಾಕ್ಷಿದಾರ ಅಂತ ಸಹಿ ಮಾಡಿರುವ ವ್ಯಕ್ತಿಗಳೇ ಸಹ ನಿಪಿ 4 ರ ದಾಖಲೆಯ ಮೇಲೆ ಸಹಿ ಮಾಡಿರುವರು ಎಂದರೆ ಸರಿಯಲ್ಲ. ಖರೀದಿ ಪತ್ರದ ಮೇಲೆ ಸಾಕ್ಷಿದಾರ ಅಂತ ರಂಗಪ್ಪ ಅಮಲಜರಿ ಮತ್ತು ಎಲ್ ಕೆ ಅಮಲಜರಿ ಎಂಬುವವರು ಸಹಿ ಮಾಡಿರುವರು. ಜಿ ಆರ್ ಸಿಂಗರೆಡ್ಡಿ ಎಂಬುವವರು ಸಹ ಸಹಿ ಮಾಡಿರುವರು. ಈ ಖರೀದಿ ಪತ್ರ ನಿಪಿ 5 ರ ದಾಖಲೆಯನ್ನು ನಾವು ಖೊಟ್ಟಿಯಾಗಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 5 ರ ದಾಖಲೆಯನ್ನು ನಾವು ಬರೆದುಕೊಂಡು ವಾದಿಯರನ್ನು ಮುಧೋಳ ಪಟ್ಟಣಕ್ಕೆ ಕರೆಸಿ ಅವರ ಕಡೆಯಿಂದ ಆ ದಾಖಲೆಯ ಮೇಲೆ ಸಹಿ

ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 5 ರ ದಾಖಲೆಯನ್ನು ದಸ್ತೂರು ಬರಹಗಾರರಾದ ಬಿ ಎಂ ತೆಗ್ಗಿ ಎಂಬುವವರಿಗೆ ಸ್ವತಃ ಮಾಹಿತಿ ನೀಡಿ ಅದನ್ನು ತಯಾರು ಮಾಡಿಸಿಕೊಂಡು ವಾದಿಯರಿಗೆ ಮುಧೋಳ ಪಟ್ಟಣಕ್ಕೆ ಬರುವಂತೆ ಹೇಳಿ ಅದನ್ನು ನೊಂದ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಸ್ತೂರು ಬರಹಗಾರ ಬಿ ಎಂ ತೆಗ್ಗಿ ಇವರ ಕಚೇರಿ ಮುಧೋಳ ಪಟ್ಟಣದಲ್ಲಿ ಇರುವುದಿಲ್ಲ ಆ ಕಾರಣಕ್ಕೆ ನಿಪಿ 5 ರ ದಾಖಲೆಯನ್ನು ಲೋಕಾಪೂರದಲ್ಲಿ ಖೊಟ್ಟಿರೀತಿಯಿಂದ ತಯಾರು ಮಾಡಿಕೊಂಡು ಬಂದು ಅದನ್ನು ವಾದಿಯರ ಕಡೆಯಿಂದ ಖೊಟ್ಟಿಯಾಗಿ ನೊಂದಣಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2026.01.08 10:51:15 +0530